**ಕರ್ನಾಟಕ ಅರಣ್ಯ ಇಲಾಖೆ**

# ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿರವರ ಕಛೇರಿ.

ಕ್ರ.ಸಂ.:ಎ2–ಹೊಗು/ಇ–ಟೆಂಡರ್/ವಿವ–74/19–20 ದಿನಾಂಕ:28–06–2019

## ಅಲ್ಪಾವಧಿ ಟೆಂಡರ್ ಪ್ರಕಟಣೆ
## (e-procurement)

-o-

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ಇವರ ಕಛೇರಿಯಲ್ಲಿ 2019–20ನೇ ಸಾಲಿನಲ್ಲಿ **ಅನುಬಂಧ–1** ರಲ್ಲಿ ಕಾಣಿಸಿದ ಕಾಮಗಾರಿಗಳಿಗೆ e-procurement ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಈ ಕಛೇರಿಯಲ್ಲಿ 2019–20ನೇ ಸಾಲಿಗೆ ನೋಂದಾಯಿತ ಹೊರಸಂಪನ್ಮೂಲ ಏಜನ್ಸಿಯವರಿಂದ ನೋಂದಣಿ ಹೊಂದಿರುವವರು ಇ-ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.

| | | |
|---|---|---|
| ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ: | : | 20–07–2019 ರಂದು 16:00 ಗಂಟೆಯವರೆಗೆ |
| ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ | : | 22–07–2019 ರಂದು 16:00 ಗಂಟೆಯವರೆಗೆ |
| ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: | : | 23–07–2019 ರಂದು 17:00 ಗಂಟೆಯವರೆಗೆ |

**ಶರತ್ತುಗಳು:**

1) ಟೆಂಡರ್‌ನಲ್ಲಿ ಭಾಗವಹಿಸುವ ಹೊರಗುತ್ತಿಗೆ ಏಜನ್ಸಿಯವರು ಸದ್ರಿ ಕೆಲಸಗಳಿಗೆ ಕೆಲಸಗಾರರನ್ನು ಒದಗಿಸಿ ಕೊಡಲು ತಾವು ತೆಗೆದುಕೊಳ್ಳುವ ಶುಲ್ಕವನ್ನು ಮಾತ್ರ ಸ್ಪಷ್ಟವಾಗಿ ನಮೂದಿಸಬೇಕು.

2) **ಟೆಂಡರುದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಮಾಡಿರಬೇಕು.**

ಎ) ಕಾರ್ಮಿಕ ಕಾಯ್ದೆ
ಬಿ) ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ
ಸಿ) ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ
ಡಿ) ಆದಾಯ ತೆರಿಗೆ ಕಾಯ್ದೆ
ಇ) ಸೇವಾ ತೆರಿಗೆ ಕಾಯ್ದೆ
ಎಫ್) ಸರಕು ಮತ್ತು ಸೇವಾ ತೆರಿಗೆ ಕಾಯ್ದೆ (GST)

3) ತಾಂತ್ರಿಕ ಬಿಡ್‌ನಲ್ಲಿ ಈ ಕೆಳಕಂಡ ದಾಖಲೆಗಳನ್ನು ಅಪ್‌ಲೋಡ್ ಮಾಡಿರಬೇಕು.

ಎ) 2016–17, 2017–18 ಮತ್ತು 2018–19 ನೇ ಸಾಲಿನ ಆದಾಯ ತೆರಿಗೆ ರಿಟರ್ನ್ಸ್
ಬಿ) 2016–17, 2017–18 ಮತ್ತು 2018–19 ನೇ ಸಾಲಿನ ಬ್ಯಾಲನ್ಸ್ ಶೀಟ್
ಸಿ) 2016–17 ಮತ್ತು 2017–18ನೇ ಸಾಲಿನ ವ್ಯಾಟ್/ಜಿಎಸ್‌ಟಿ ಕ್ಲಿಯರನ್ಸ್
ಡಿ) ಹೊರಸಂಪನ್ಮೂಲ ಏಜನ್ಸಿಯಾಗಿ ಈ ಹಿಂದೆ ಮಾನವ ಸಂಪನ್ಮೂಲ ಸೇವೆಯನ್ನು ವಿವಿಧ ಸರ್ಕಾರಿ ಮತ್ತು ಅರೆ ಸರ್ಕಾರಿ ಇಲಾಖೆಗಳಿಗೆ ನೀಡಿರಬೇಕು ಮತ್ತು ಈ ಬಗ್ಗೆ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳು
ಇ) ಟೆಂಡರುದಾರ ಸಂಸ್ಥೆಯು/ವ್ಯಕ್ತಿಯು ಕಳೆದ ವರ್ಷಗಳಲ್ಲಿ ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಕನಿಷ್ಠ ಸರಾಸರಿ ರೂ.50.00ಲಕ್ಷ ಇರತಕ್ಕದ್ದು. ವಿವರಗಳು ಮತ್ತು ದಾಖಲೆಗಳು
ಎಫ್) ಟೆಂಡರುದಾರರು ಆರ್ಥಿಕವಾಗಿ ಸದೃಢರಾಗಿರಬೇಕು. ಈ ಬಗ್ಗೆ ಟೆಂಡರ್‌ಗಿಟ್ಟ ಮೊಬಲಗಿನ ಶೇಕಡಾ 30 ರಷ್ಟು ಹಣದ ಬಗ್ಗೆ ಇದೇ ಉದ್ದೇಶಕ್ಕಾಗಿ ಬ್ಯಾಂಕ್ ಸಾಲ್ವೆನ್ಸಿ ಪ್ರಮಾಣ ಪತ್ರ ದಾಖಲೆ
ಜಿ) ಪ್ರಸ್ತುತ ಸಾಲಿನ ಗುತ್ತಿಗೆ ಅವಧಿ ಮುಗಿದ ನಂತರ ಮುಂದಿನ ಆರ್ಥಿಕ ವರ್ಷದ ಮೂರು ತಿಂಗಳ ಅವಧಿಗೆ ಅಥವಾ ಮುಂದಿನ ಸಾಲಿನ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ತನಕ ಅಂದರೆ ಕನಿಷ್ಠ ಎಪ್ರಿಲ್–2020 ರಿಂದ ಜೂನ್–2020 ರ ವರೆಗೆ ಈ ಸಾಲಿನ ಟೆಂಡರ್ ದರದಲ್ಲಿಯೇ ಹೊರಗುತ್ತಿಗೆ ನೌಕರರನ್ನು ಒದಗಿಸಲು ಬದ್ಧರಾಗಿರುವ ಕುರಿತು ದೃಢೀಕರಣ.
ಹೆಚ್) ಕಾರ್ಮಿಕ ಕಾಯ್ದೆಯಡಿ ನೋಂದಾಯಿಸಿರುವ ನೋಂದಣಿ ಪತ್ರ.
ಐ) ಕಾರ್ಮಿಕ ಭವಿಷ್ಯನಿಧಿ (ಇ.ಪಿ.ಎಫ್.) ನೋಂದಣಿ ಪ್ರಮಾಣ ಪತ್ರ.
ಜೆ) ಕಾರ್ಮಿಕ ವಿಮೆ (ಇ.ಎಸ್.ಐ.) ಪ್ರಮಾಣ ಪತ್ರ.

ಘು)   ಸರಕು ಮತ್ತು ಸೇವಾ ತೆರಿಗೆ ನೋಂದಣಿ ಪತ್ರ.
ಘು) ಆದಾಯ ತೆರಿಗೆ ನೋಂದಣಿ ಪಾನ್ ಕಾರ್ಡ್.
ಘು) ಆಧಾರ ಕಾರ್ಡ್.

**The contractor should upload the following certified copies of the document in the e-portal**

i. Income tax returns for the year 2016-17, 2017-18 and 2018-19

ii. Balance sheet for the year 2016-17, 2017-18 and 2018-19

iii. VAT /GST clearance for the year 2016-17 and 2017-18.

iv. Certified copies of work done certificate for supply of man power to Government department/ Semi Government department.

v. The bidder should upload the documents for having the turn over of Rs.50.00lakhs in the last year.

vi. Tenderer must be financially sound. The bidder should upload 30% of the bid amount of the Bank's Solvency Certificate taken for this purpose.

vii. The bidder should abide to provide outsourced employees for the period of three months from April -2020 to June -2020 following the expiration of the current tender or until the next tender process is completed.

viii. Copy of Registration certificate issued under Labour Act

ix. Copy of Registration certificate issued under (EPF)

x. Copy of Registration certificate issued under (ESI)

xi. Copy of Registration certificate issued under (GST)

xii. Copy of Registration certificate issued under Income Tax PAN Card

xiii. Aadhar card

4) ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್.), ಕಾರ್ಮಿಕ ವಿಮೆ (ಇ.ಎಸ್.ಐ.), ವೃತಿ ತೆರಿಗೆ (ಪ್ರೋಫೆಶನಲ್ ಟ್ಯಾಕ್ಸ್), ಸೇವಾ ತೆರಿಗೆಗಳನ್ನು ಸರ್ಕಾರ ಆಗಾಗ ನಿಗದಿ ಪಡಿಸುವ ದರದಲ್ಲಿ ಹಾಗೂ ಅಷ್ಟೇ ಪ್ರಮಾಣದಲ್ಲಿ ಕಡಿತಗೊಳಿಸಬೇಕು ಹಾಗೂ ಸಂಸ್ಥೆಯವರು ಸಹ ತಮ್ಮ ಭಾಗದ ವಂತಿಗೆಯನ್ನು ನೌಕರರ ವೇತನದಲ್ಲಿ ಸೇರಿಸಿ ಪಾವತಿ ಮಾಡಿ ಸಿಬ್ಬಂದಿಗಳ ವೈಯಕ್ತಿಕ ಖಾತೆಗೆ ಜಮೆ ಮಾಡಿದ ಬಗ್ಗೆ ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು, ಇವೆಲ್ಲವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಭರಿಸಿ ಟೆಂಡರ್‌ದಾರರು ಪಾವತಿಸತಕ್ಕದ್ದು, ಈ ರೀತಿ ಪಾವತಿಸಿದ ಕಡಿತಗಳ ವಿವರಗಳನ್ನು ಪ್ರತಿ ತಿಂಗಳು ಮುಗಿದ ನಂತರ ಸಂಬಂಧ ಪಟ್ಟ ವೋಚರ್‌ಗಳು, ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಿ ಎಲ್ಲಾ ಹಣವನ್ನು ಇಲಾಖೆಯಿಂದ ಮರುಪಾವತಿ ಮಾಡಿಕೊಳ್ಳುವುದು ಯಾವುದೇ ಕಾರಣಕ್ಕೂ ಮರುಪಾವತಿ ಅಲ್ಲದೇ ಮುಂಗಡವಾಗಿ ಸಂಸ್ಥೆಯವರಿಗೆ ಹಣವನ್ನು ನೀಡಲಾಗುವುದಿಲ್ಲ. ಸಂಸ್ಥೆಯವರು ಯಾವುದೇ ಕಾರಣಕ್ಕೂ 2 ತಿಂಗಳಿಗೂ ಹೆಚ್ಚು ಕಾಲ ಪರಿಶ್ರಮ ಧನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಒಂದು ವೇಳೆ ಪರಿಶ್ರಮ ಧನ ಪಾವತಿಗೆ ವಿಳಂಬ ಮಾಡಿದಲ್ಲಿ ಇದು ಟೆಂಡರ್ ಷರತ್ತು ಉಲ್ಲಂಘನೆ ಎಂದು ಪರಿಗಣಿಸಿ ಎರಡನೇ ಪಾರ್ಟಿಯವರು ಟೆಂಡರ್ ರದ್ದು ಮಾಡುವ ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕುವ ಅಧಿಕಾರವನ್ನು ಹೊಂದಿರುತ್ತಾರೆ.

5) ಹೊರಗುತ್ತಿಗೆ ಸಿಬ್ಬಂದಿಗಳ ಮಾಹೆಯಾನ ವೇತನ ಬಿಲ್ಲುಗಳನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸುವ ಮೊದಲು ಸಂಬಂಧಪಟ್ಟ ತಿಂಗಳಲ್ಲಿ ನಿಗದಿ ಪಡಿಸಿದ ಕಟಾವಣೆಗಳನ್ನು (ಪಿ.ಎಫ್, ಇ.ಎಸ್.ಐ, ಎಸ್.ಟಿ,) ಮಾಡಿ, ಪ್ರತಿ ಮಾಹೆಯಾನ ಸಿಬ್ಬಂದಿಗಳ ವೇತನ ಬಿಲ್ಲು ಸಲ್ಲಿಸುವಾಗ ಮೇಲಿನ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಹಾಗೂ ಸಿಬ್ಬಂದಿಗಳ ವೈಯಕ್ತಿಕ ಖಾತೆಗೆ (ಪಿ.ಎಫ್, ಇ.ಎಸ್.ಐ) ಪಾವತಿಸಿದ ಬಗ್ಗೆ ಅವರುಗಳ ಮೊಬೈಲುಗಳಿಗೆ ಮಾಹಿತಿ ರವಾನಿಸಲ್ಪಡುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು, ವೇತನ ನೀಡುವಾಗ ಮೂರು ರಸೀದಿಗಳನ್ನು ತಯಾರಿಸಿ ಒಂದನ್ನು ನೌಕರನಿಗೆ, ಮತ್ತೆರಡನ್ನು ಬಿಲ್ಲಿನ ಜೊತೆ ಲಗತ್ತಿಸಿ ಪಾವತಿಗಾಗಿ ಸಲ್ಲಿಸುವುದು. ಇದನ್ನು ಪಾಲಿಸದಿದ್ದಲ್ಲಿ ಗುತ್ತಿಗೆ ಆದೇಶ ರದ್ದು ಪಡಿಲಾಗುವುದು. ಯಾವುದೇ ಕಾರಣಕ್ಕೂ ಇಲಾಖೆಯ ವಿವಿಧ ಕಛೇರಿಗಳಿಂದ ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಪಾವತಿಗೆ ವಿಳಂಬವಾದಲ್ಲಿ ಸಂಸ್ಥೆಯು ಸಿಬ್ಬಂದಿಗಳಿಗೆ ತೊಂದರೆಯಾಗದಂತೆ ತಮ್ಮ ಸಂಸ್ಥೆಯಿಂದಲೇ ಸ್ವಂತ ಹಣ ಪಾವತಿಸಲು ಬದ್ದರಿರತಕ್ಕದ್ದು.

6) ಏಜೆನ್ಸಿಯವರು ಕನಿಷ್ಠ ಎರಡು ತಿಂಗಳ ಅವಧಿಯಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪ್ರತಿಯೊಬ್ಬ ಸಿಬ್ಬಂದಿಯ ಇಎಸ್‌ಐ ಮತ್ತು ಇಪಿಎಫ್ ಖಾತೆಗಳನ್ನು ತೆರೆದು ಆ ಖಾತೆಗಳಲ್ಲಿ ಸಿಬ್ಬಂದಿಯ ಭಾಗ ಮತ್ತು ಎಂಪ್ಲಾಯರ್ಸ್ ಭಾಗದ ಹಣವನ್ನು ಪ್ರತಿ ತಿಂಗಳು ತಪ್ಪದೇ ಜಮಾ ಮಾಡಬೇಕು ಹಾಗೂ ಖಾತೆಯನ್ನು ತೆರೆದ ಬಗ್ಗೆ ದಾಖಲೆಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಇವರ ಕಛೇರಿಗೆ ಸಲ್ಲಿಸಬೇಕು. ಒಂದು ವೇಳೆ ಖಾತೆ ತೆರೆಯದಿದ್ದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದು ಪಡಿಲಾಗುವುದು ಮತ್ತು ಈ

ಖಾತೆ ತೆರೆಯುವ ವರೆಗಿನ ಅವಧಿಯಲ್ಲಿ ಯಾವುದೇ ನೌಕರರ ವಂತಿಕೆ ಕಡತಗಳನ್ನು ಟೆಂಡರ್‌ದಾರರು ಕಟಾವು ಮಾಡಬಾರದು ಮತ್ತು ಈ ಸಂಬಂಧ ನೌಕರರಿಗೆ ಪರಿಶ್ರಮ ಧನದಲ್ಲಿ ಸೇರಿಸಿ ನೀಡಬೇಕು.

7) ಅನುಬಂಧ–1 ರಂತೆ ವಿಭಾಗೀಯ, ಉಪ–ವಿಭಾಗೀಯ ಹಾಗೂ ವಲಯ ಅರಣ್ಯಾಧಿಕಾರಿಗಳ ಕಛೇರಿಗಳಲ್ಲಿ ಹಿಂದೆ ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ 13 ಸಿಬ್ಬಂದಿಗಳನ್ನು ಹಾಗೂ ಬೇಟೆ ತಡೆ ಶಿಬಿರದಲ್ಲಿ 24 ಜನರನ್ನು ಮುಂದುವರೆಸುವುದು.

8) ಈಗಾಗಲೇ ರಕ್ಷಣಾ ಕಾರ್ಯದಲ್ಲಿ ನೇಮಿಸಿಕೊಂಡ ದಿನಗೂಲಿ ನೌಕರರಲ್ಲಿ ಸ್ಥಳೀಯ ಯುವಕರಿಗೆ ಕಡ್ಡಾಯವಾಗಿ ಇದ್ದ ಸ್ಥಳದಲ್ಲಿಯೇ ಮುಂದುವರಿಸುವುದು.

9) ಟೆಂಡರುದಾರರು ಪ್ರಸ್ತುತ ಸಾಲಿನ ಗುತ್ತಿಗೆ ಅವಧಿ ಮುಗಿದ ನಂತರ ಇಲಾಖೆ ಬಯಸಿದಲ್ಲಿ ಮುಂದಿನ ಸಾಲಿನ 3 ತಿಂಗಳ ಅವಧಿಗೆ ಅಥವಾ ಮುಂದಿನ ಸಾಲಿನ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವ ತನಕ ಮಾನವ ಸಂಪನ್ಮೂಲವನ್ನು ಒದಗಿಸಲು ಬದ್ಧರಾಗಿರಬೇಕು.

10) ಟೆಂಡರುದಾರರು ಮಾನವ ಹೊರಸಂಪನ್ಮೂಲ ಏಜನ್ಸಿಯಾಗಿ ವಿವಿಧ ಸಂಸ್ಥೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ಪ್ರತಿ ವರ್ಷ ಸರಾಸರಿ 50 ಸಿಬ್ಬಂದಿಗಳನ್ನು ಒದಗಿಸಿದ ಅನುಭವ ಹೊಂದಿರಬೇಕು.

11) ಟೆಂಡರ್ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ಹೊಂದಿರುತ್ತಾರೆ.

12) ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಲ್ಲಿಸಬೇಕು.

13) ಟೆಂಡರು ಪ್ರಕಟಣೆ ನಮೂದಿಸಿದ ಕೆಲಸಗಳ ಮಜೂರಿ ಪಾವತಿಯು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಮಿತಿಗೆ ಒಳಪಡುತ್ತದೆ. ಒಂದೊಮ್ಮೆ ಗುತ್ತಿಗೆದಾರರು ಸರಬರಾಜು ಮಾಡಿದ ನೌಕರರ ಮಜೂರಿ ಪಾವತಿಗೆ ಅನುದಾನ ದೊರೆಯುವುದು ವಿಳಂಬವಾದಲ್ಲಿ ಗುತ್ತಿಗೆದಾರರು ಸರಬರಾಜು ಮಾಡಿದ ನೌಕರರ ಮಜೂರಿಯ ಮೊತ್ತದ ಮೇಲೆ ಯಾವುದೇ ರೀತಿಯ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.

14) ಯಾವುದೇ ಇಲಾಖೆ/ ಸಂಸ್ಥೆಯಲ್ಲಿ ಕಪ್ಪು ಪಟ್ಟಿಗೆ ಸೇರಿದ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸತಕ್ಕದ್ದಲ್ಲ.

15) ವಿವಿಧ ತರಹದ ಸೇವೆಗಳಿಗೆ ಸಂಬಂಧಿಸಿದಂತೆ ಹಾಲಿ ಇರುವ ದರದಂತೆ 2019–20ನೇ ಸಾಲಿಗೆ ಮಜೂರಿ ಪಾವತಿಸಬೇಕಾಗಿರುತ್ತದೆ.

| ಕ್ರ. ಸಂ. | ಕೆಲಸದ ವಿವರ | ಇಲಾಖಾ ದರ (ಪ್ರತಿ ದಿನಕ್ಕೆ) | ಸೇವಾಶುಲ್ಕ ಶೇ (%) |
|---|---|---|---|
| 1 | ಕಂಪ್ಯೂಟರ್ ಆಪರೇಟರ್ | 357.72 | |
| 2 | ಲಘು ವಾಹನ ಚಾಲಕರು | 337.72 | |
| 3 | ಕಾವಲುಗಾರರು | 327.72 | |
| 4 | ಡಿ ದರ್ಜೆ (ಸ್ವೀಪರ್) | 327.72 | |
| 5 | ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿಗಳು | 327.72 | |

16) ಪ್ರತಿ ತಿಂಗಳು ಮುಕ್ತಾಯಗೊಂಡ ನಂತರ ಸಂಬಂಧಪಟ್ಟ ಬಿಲ್ಲನ್ನು ಆಯಾಯ ವಲಯ ಅರಣ್ಯಾಧಿಕಾರಿಯವರ ಮುಖಾಂತರ ಹಣ ಪಾವತಿಗಾಗಿ ಸಲ್ಲಿಸುವುದು.

17) ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಈವರೆಗೆ ಮಾಸಿಕ ಮಜೂರಿ ಪಾವತಿಸುವಾಗ ಸಂಬಂಧಪಟ್ಟ EPF, ESI ಯನ್ನು ಕಡಿತಗೊಳಿಸಿ ಮಜೂರಿಯನ್ನು ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬೇಕು.

18) ಟೆಂಡರುದಾರರು ಮಾನವ ಸಂಪನ್ಮೂಲವನ್ನು ಒದಗಿಸಿದ ನಂತರ ಅವರಿಗೆ ಪ್ರತಿ ತಿಂಗಳು ಸೂಕ್ತ ಅವಧಿಯ ಹಣವನ್ನು ಪಾವತಿಸಬೇಕು ಹಾಗೂ ಈ ವಿಭಾಗದಿಂದ ಹಣವನ್ನು ಪಾವತಿಸಿದ ನಂತರವೂ ಕೆಲಸಗಾರರಿಗೆ ಹಣ ಪಾವತಿಸದಿರುವುದು ಕಂಡುಬಂದಲ್ಲಿ ಯಾವುದೇ ಕಾರಣ ನೀಡದೇ ನಿಮಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸುವ ಷರತಿಗೆ ಒಳಪಟ್ಟಿರಬೇಕು.

19) ಟೆಂಡರ್‌ನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರಬೇಕು ಮತ್ತು ಚುನಾವಣಾ ಆಯೋಗವು ನೀಡುವ ಗುರುತಿನ ಚೀಟಿಯನ್ನು ಹೊಂದಿರಬೇಕು.

20) ಯಶಸ್ವಿ ಟೆಂಡರುದಾರರು ಯಾವುದೇ ಕಾರಣಕ್ಕೂ ಸದ್ರಿಯವರ ಟೆಂಡರನ್ನು ಇನ್ನೊಬ್ಬರಿಗೆ ವರ್ಗಾಯಿಸಲು ಅವಕಾಶ ಇರುವುದಿಲ್ಲ.

21) ಟೆಂಡರಿನಲ್ಲಿ ಇಡಲಾದ ಕಾಮಗಾರಿಯನ್ನು ಯಾವುದೇ ಕಾರಣ ನೀಡದೇ ಟೆಂಡರು ಪ್ರಕ್ರಿಯೆಯಿಂದ ಹೊರಗಿಡುವ ಹಕ್ಕನ್ನು ಈ ಕೆಳ ಸಹಿದಾರರು ಕಾಯ್ದಿರಿಸಿಕೊಂಡಿರುತ್ತಾರೆ.

22) ಈ ಟೆಂಡರ್‌ನಲ್ಲಿ ನಮೂದಿಸಿದ ಕೆಲಸಗಳಿಗೆ ಕ್ರಿಯಾ ಯೋಜನೆಯಲ್ಲಿ ಮಂಜೂರಾಗುವ ಮೊತ್ತವೆ ಅಂತಿಮವಾಗಿರುತ್ತದೆ. ಇದಕ್ಕೆ ಟೆಂಡರಿನಲ್ಲಿ ಭಾಗವಹಿಸುವ ಹೊರ ಗುತ್ತಿಗೆದಾರ ಸಂಸ್ಥೆಯವರು ಬದ್ದರಿರಬೇಕು ಅಲ್ಲದೆ ಸದ್ರಿ ಕೆಲಸಗಳಿಗೆ ಅನುದಾನ ಬಿಡುಗಡೆಯಾದಲ್ಲಿ ಮಾತ್ರ ಕಾರ್ಯಾದೇಶ ನೀಡಲಾಗುವುದು. ಅನುದಾನ ಬಿಡುಗಡೆಯಾಗದಿದ್ದಲ್ಲಿ ಟೆಂಡರನ್ನು ರದ್ದುಗೊಳಿಸುವ ಅಧಿಕಾರ ಈ ಕೆಳಸಹಿದಾರರು ಹೊಂದಿರುವುದಾಗಿದೆ.

23) ಅಗತ್ಯವಿದ್ದಲ್ಲಿ ಸವಿವರವಾದ ಟೆಂಡರು ಷರತ್ತುಗಳನ್ನು ಪ್ರತ್ಯೇಕವಾಗಿ ಹೊರಡಿಸುವುದಾಗಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರು ಹಾಕುವ ಮೊದಲು ಟೆಂಡರು ಷರತ್ತುಗಳನ್ನು ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳಬೇಕಾಗಿ ತಿಳಿಸಿದೆ.

24) ಟೆಂಡರಿಗೆ ಪ್ರಕಟಿಸಲಾದ ದಿನಾಂಕ ಯಾವುದಾದರು ಕಾರಣಗಳಿಗಾಗಿ ಸರಕಾರಿ ರಜೆಯಾಗಿ ಘೋಷಣೆಯಾದಲ್ಲಿ ಸದ್ರಿ ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ರಜೆ ನಂತರದ ಕಛೇರಿ ದಿನಾಂಕದಂದು ಟೆಂಡರ್ ತೆರೆಯಲಾಗುವುದು. ಇದಕ್ಕಾಗಿ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

25) ಟೆಂಡರ್‌ನಲ್ಲಿ ನಮೂದಿಸಿದ ಕೆಲಸ ಕಾರ್ಯಗಳಿಗೆ ನಿಗಧಿಪಡಿಸಿದ ದರ ಮತ್ತು ಮೊತ್ತದಲ್ಲಿ ಹೆಚ್ಚು ಕಡಿಮೆ ಆಗ ಬಹುದಾಗಿದ್ದು, ಮಂಜೂರಾದ ಅಂದಾಜು ಪಟ್ಟಿಯೇ ಅಂತಿಮವಾಗಿರುತ್ತದೆ.

26) ನಿಗಧಿಪಡಿಸಿದ ಅವಧಿಯ ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ.

27) ಟೆಂಡರು ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು. ಅಲ್ಲಿಯವರೆಗೆ ಕಡಿಮೆ ಟೆಂಡರುದರ ನಮೂದಿಸಿರುವ ಗುತ್ತಿಗೆದಾರರ ಇಎಂಡಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ. ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಸು ಪಡೆಯಲು ಅವಕಾಶ ಇರುವುದಿಲ್ಲ.

28) ಅನುಬಂಧ 1ರಲ್ಲಿ ತೋರಿಸಿರುವ ಹೊರಗುತ್ತಿಗೆ ಕೆಲಸಗಾರರ ಸಂಖ್ಯೆಯು ಹೆಚ್ಚು ಅಥವಾ ಕಡಿಮೆ ಆಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತೀರ್ಮಾನವೇ ಅಂತಿಮವಾಗಿದ್ದು ಅದಕ್ಕೆ ಬದ್ದರಾಗಿರತಕ್ಕದ್ದು.

29) ಒಂದೊಮ್ಮೆ ಅನಿವಾರ್ಯ ಕಾರಣಗಳಿಂದ ಈಗಾಗಲೇ ಎಪ್ರಿಲ್ ಮಾಹೆಯಿಂದ ಹೊರಗುತ್ತಿಗೆ ನೌಕರರು ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಆ ಅವಧಿಗೂ ಸಹ ವೇತನ ಹಾಗೂ EPF, ESI ನ್ನು ಸಹ ಪಾವತಿ ಮಾಡಲು ಬದ್ಧರಿರತಕ್ಕದ್ದು.

30) ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ.

-